ನಡೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :- ವೆಲ್‌ನಲ್ಲಿರುವ ಸದಸ್ಯರು ದಯವಿಟ್ಟು ತಮ್ಮ ಸ್ಥಾನಕ್ಕೆ ಹೋಗಿ.

ಶ್ರೀ ಹೆಚ್.ಸಿ.ಬಾಲಕೃಷ್ಣ :- ಸಭಾನಾಯಕರು ಸುಮ್ಮನೆ ಕುಳಿತಿರುವುದನ್ನು ನೋಡಿದರೆ, ಇದರಲ್ಲಿ ಏನೋ ಅಡಗಿರುವುದು ಹೊರನೋಟಕ್ಕೆ ವ್ಯಕ್ತವಾಗುತ್ತಿದೆ. ಈ ವಿಚಾರದಲ್ಲಿ ಸಭಾನಾಯಕರು ಉತ್ತರವನ್ನು ಕೊಡಬಹುದಾಗಿತ್ತು. ವಿರೋಧಪಕ್ಷದವರಿಗೆ ನ್ಯಾಯ ದೊರಕಿಸಿಕೊಡುವುದಕ್ಕೆ ಸಭಾನಾಯಕರು ಮಧ್ಯಪ್ರವೇಶ ಮಾಡಬಹುದಾಗಿತ್ತು. ಅವರಿಂದ ಸರಿಯಾದ ಉತ್ತರವನ್ನು ನಾವು ಅಪೇಕ್ಷೆಪಟ್ಟಿದ್ದೆವು. ಅವರು ನಮ್ಮ ನಿರೀಕ್ಷೆಯ ರೀತಿಯಲ್ಲಿ ಅವರು ಉತ್ತರವನ್ನು ಕೊಡಲಿಲ್ಲ. ಉದ್ದೇಶಪೂರ್ವಕವಾಗಿ ಮಾಡಿರುವುದೆಂಬುದನ್ನು ಅವರು ಈಗ ಒಪ್ಪಿಕೊಂಡಿದ್ದಾರೆ. ಮೇಲ್ಮನವಿಗೆ ನ್ಯಾಯವನ್ನು ಚುನಾವಣೆಯಾದ ಮೇಲೆ ಕೊಡುತ್ತೀರಾ ಸ್ವಾಮಿ? ಕೆಎಂಎಫ್ ಚುನಾವಣೆಯಾದ ಮೇಲೆ ನಿಮಗೆ ಮೇಲ್ಮನವಿಯನ್ನು ತೆಗೆದುಕೊಂಡು ಪರಿಶೀಲನೆ ಮಾಡಿ ಕೊಡುತ್ತೀರಾ? ಚುನಾವಣೆ ದೃಷ್ಟಿಯಿಂದ ಮಾಡುತ್ತಾರೆಂಬುದನ್ನು ಈಗಾಗಲೇ ವಿರೋಧಪಕ್ಷದ ನಾಯಕರು ಹೇಳಿದ್ದಾರೆ. ನೀವು ಅವರ ಸಲಹೆಯನ್ನು ಕೂಡ ಒಪ್ಪಿಕೊಳ್ಳುವುದಕ್ಕೆ ತಯಾರಿಲ್ಲ. ಆದುದರಿಂದ, ನಾವು ಈ ನಿಲುವನ್ನು ಖಂಡಿಸಿ ವಾಕ್ ಔಟ್ ಮಾಡುತ್ತಿದ್ದೇವೆ.

[ಈ ಸಂದರ್ಭದಲ್ಲಿ ಜೆಡಿಎಸ್‌ನ ಸದಸ್ಯರುಗಳು ಸಭಾ ತ್ಯಾಗ ಮಾಡಿದರು.]

ಅಧ್ಯಕ್ಷರು:- ಈಗ ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಮಾನ್ಯ ವಿರೋಧಪಕ್ಷದ ನಾಯಕರಾದ ಸಿದ್ದರಾಮಯ್ಯನವರು ಚರ್ಚೆ ಆರಂಭಿಸುವರು.

ಶ್ರೀ ಸಿದ್ದರಾಮಯ್ಯ :- ಸೋಮವಾರ ಪ್ರಶ್ನೋತ್ತರವೇಳೆಯಾದ ಮೇಲೆ ತೆಗೆದುಕೊಳ್ಳಿ, ಸುರೇಶ್ ಕುಮಾರ್, ನಿನ್ನೆ ತಾವು ಹೇಳಿದಿರೆಂದು ಒಪ್ಪಿಕೊಂಡೆ.

ಶ್ರೀ ಎಸ್.ಸುರೇಶ್ ಕುಮಾರ್ :- ಬಹಳ ಧನ್ಯವಾದಗಳು.

ಅಧ್ಯಕ್ಷರು :- ಆಯಿತು, ಈಗ ವಿತ್ತೀಯ ಕಾರ್ಯಕಲಾಪ.

4.ವಿತ್ತೀಯ ಕಾರ್ಯಕಲಾಪ